ದಿನಾಂಕಃ 22.04.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಪ್ರತಿವಾದಿ-16 ರವರ ಪರ ವಕೀಲರಿಂದ :**

ಸಾಕ್ಷಿ ತಮ್ಮ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿ, ಸದರಿ ಪ್ರಮಾಣ ಪತ್ರದಲ್ಲಿ ಬರೆಸಿರುವ ವಿಷಯಗಳನ್ನು ಓದಿಸಿ, ಕೇಳಿ ತಿಳಿದುಕೊಂಡು ಸರಿ ಮತ್ತು ಸತ್ಯವಾಗಿರುತ್ತವೆ ಎಂದು ಸಹಿ ಮಾಡಿರುವುದಾಗಿ ತಿಳಿಸಿರುತ್ತಾರೆ.

ಕುಟುಂಬದ ವ್ಯವಸ್ಥಾ ಪತ್ರವನ್ನು ನಿಡಿ-37 ಎಂದು, ಕ್ರಯಪತ್ರವನ್ನು ನಿಡಿ-38 ಎಂದು, ಮ್ಯುಟೇಷನ್ ಪ್ರತಿಯನ್ನು ನಿಡಿ-39 ಎಂದು, 3 ಪಹಣಿಗಳನ್ನು ನಿಡಿ-40 ರಿಂದ 42 ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ವಾದಿಗಳ ಪರ ವಕೀಲರಿಂದ :**

ಪ್ರತಿವಾದಿ-1 ರವರು ನನಗೆ ಸಂಬಂಧಿಕರಾಗಬೇಕು. 1ನೇ ಪ್ರತಿವಾದಿಯು ನಿಡಿ-37 ನ್ನು ಬರೆದುಕೊಟ್ಟಿರುತ್ತಾರೆ. ನಿಡಿ-37 ರ ಆಧಾರದ ಮೇಲೆ ನಾನು ಸದರಿ ಆಸ್ತಿ ಖರೀದಿಸಿರುತ್ತೇನೆ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**